ದಿನಾಂಕ **31.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ವಾದಿ ಪರ ವಕೀಲರಿಂದ

ನಮ್ಮ ಪಂಚಾಯ್ತಿ ಗ್ರೇಡ್-1 ಪಂಚಾಯ್ತಿ ಆಗಿರುತ್ತದೆ. ದಿಃ27.07.2025 ರಂದು ನಾನು ಶ್ರವಣಬೆಳಗೊಳ ಗ್ರಾಮ ಪಂಚಾಯ್ತಿಯ ಪಿ.ಡಿ.ಒ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಅದಕ್ಕಿಂತ ಮೊದಲು ನಾನು ಹೊಳೆನರಸೀಪುರ ದ ಕೋಡಿಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮೇಲಾಧಿಕಾರಿಗಳ ಆದೇಶದಂತೆ ಕೆಲಸ ಮಾಡುತ್ತೇವೆ ಎಂದರೆ ಸರಿ.

ದಿಃ07.04.2022 ರಂದು ನಮ್ಮ ಮೇಲಾಧಿಕಾರಿಗಳು ಎಲ್ಲಾ ಪಂಚಾಯ್ತಿಗಳಿಗೆ ರಾಸಾಯನಿಕ ವಸ್ತುಗಳನ್ನು ಖರೀದಿಸಲು ಆದೇಶ ನೀಡಿರುತ್ತಾರೆ ಎಂದರೆ ನಿಯಮಾನುಸಾರ ಖರೀದಿಸಲು ಸೂಚಿಸಿರುತ್ತಾರೆ. ನಿಪಿ-5 ರ ಮೇಲೆ ನಮ್ಮ ಪಂಚಾಯ್ತಿಯ ಸೀಲು ಮತ್ತು ಸಹಿ ಇರುತ್ತದೆ ಎಂದರೆ ಸೀಲು ಇರುತ್ತದೆ ಸಹಿಯನ್ನು ಗುರುತಿಸಲಾಗುವುದಿಲ್ಲ. ದಿಃ14.09.2022 ರಂದು ನಮ್ಮ ಪಂಚಾಯ್ತಿಗೆ ಪಿ.ಡಿ.ಒ ನಂಜುಂಡೇಗೌಡ , ಅನುರಾಧ ರೋಹಿತ್ ಅದ್ಯಕ್ಷರಾಗಿದ್ದರು ಎಂದರೆ ಸರಿ. ನಿಪಿ-6 ರಲ್ಲಿರುವ ಮೊಬೈಲ್ ಸಂಖ್ಯೆ ಪಿ.ಡಿ.ಒ ಮತ್ತು ಅದ್ಯಕ್ಷರದ್ದು ಎಂದರೆ ಸರಿ. ನಿಪಿ-6ರ ಮೇಲೆ ಪಂಚಾಯ್ತಿಯ ಸೀಲು ಮತ್ತು ಸಹಿ ಇರುತ್ತದೆ ಎಂದರೆ ಸರಿ. ಸಹಿ ಗುರುತಿಸಲಾಗುವುದಿಲ್ಲ. ದಿಃ17.07.2024 ರಂದು ವಾದಿ ಸಂಸ್ಥೆಯವರು ನಮ್ಮ ಪಂಚಾಯ್ತಿಗೆ ನೊಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರಬಾರ ವಹಿಸಿಕೊಂಡ ಮೇಲೆ ಆ ನೊಟೀಸ್ ನ ಬಗ್ಗೆ ವಿಚಾರಿಸಿರುತ್ತೇನೆ. ವಸ್ತುಗಳನ್ನು ನಮ್ಮ ಪಂಚಾಯ್ತಿಗೆ ಸರಬರಾಜು ಮಾಡಿಲ್ಲ ಎಂದು ತಿಳಿಸಿದರು. ಆ ನೊಟೀಸ್ ಗೆ ನಮ್ಮ ಪಂಚಾಯ್ತಿಯಿಂದ ಉತ್ತರವನ್ನು ನೀಡಿಲ್ಲ. ವಾದಿ ಸಂಸ್ಥೆಗೆ ರಾಸಾಯನಿಕ ವಸ್ತು ಸರಬರಾಜು ಮಾಡಿದ ಬಗ್ಗೆ ಬಾಕಿ ಇರುವ ಹಣ ನೀಡಲು ನಮ್ಮ ಪಂಚಾಯ್ತಿ ಬಾದ್ಯಸ್ಥರು

ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.